09-02-2023
V-karnataka Pg 06

ಐಎಚ್‌ಆರ್‌ನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮೇಳ 22ರಿಂದ

'ಸ್ವಾವಲಂಬನೆಗಾಗಿ ನವೀನ ತೋಟಗಾರಿಕೆ' ಥೀಮ್‌ನಡಿ ಆಯೋಜನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಫೆ.22 ರಿಂದ 25ರವರೆಗೆ ರಾಷ್ಟ್ರೀಯ ತೋಟಗಾರಿಕೆ ಮೇಳವನ್ನು ಅದ್ಧೂರಿಯಾಗಿ ನಡೆಸಲು ಸಜ್ಜಾಗಿದೆ.

''ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಮೇಳವನ್ನು ಭೌತಿಕವಾಗಿ ನಡೆಸದೆ, ಆನ್‌ಲೈನ್ ಮೂಲಕ ಏರ್ಪಡಿಸಲಾಗಿತ್ತು. ಹೀಗಾಗಿ ಹೆಚ್ಚಿನ ಜನರಿಗೆ ಪ್ರವೇಶಾವಕಾಶ ಇರಲಿಲ್ಲ. ಈ ಬಾರಿ ಭೌತಿಕವಾಗಿ ಅದ್ಧೂರಿಯಾಗಿ ನಡೆಸುತ್ತಿದ್ದು, 'ಸ್ವಾವಲಂಬನೆಗಾಗಿ ನವೀನ ತೋಟಗಾರಿಕೆ' ಥೀಮ್‌ನಡಿ ಮೇಳ ನಡೆಯಲಿದೆ. ವೀಕ್ಷಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗುತ್ತಿದೆ,'' ಎಂದು ಐಐಎಚ್‌ಆರ್‌ನ ನಂದೀಶ್ ತಿಳಿಸಿದರು.

ಆಮದು ಪರ್ಯಾಯಕ್ಕಾಗಿ ತರಕಾರಿ ಮತ್ತು ಔಷಧೀಯ ಬೆಳೆಗಳು, ಸಂರಕ್ಷಿತ ಕೃಷಿಯಲ್ಲಿ ಪರಾಗ ಸ್ಪರ್ಶ, ಎಲೆ ಸುರುಳಿ ನಿರೋಧಕ ಮೆಣಸಿನಕಾಯಿ ಪ್ರಭೇದಗಳು, ಕ್ಯಾರೊಟಿನಾಯ್ಡ್ ಅಂಶವುಳ್ಳ ಸಮೃದ್ಧ ಚೆಂಡು ಹೂವು ಪ್ರಭೇದಗಳನ್ನು ಮೇಳದ ಅಂಗವಾಗಿ ಬಿಡುಗಡೆಗೊಳಿಸಲಾಗಿದೆ. ಜತೆಗೆ ಹೂವಿನ ತ್ಯಾಜ್ಯದ ಬಳಕೆ, ನಗರ ತೋಟಗಾರಿಕೆಗೆ ಟೆರೇಸ್ ತೋಟಗಾರಿಕೆ ಪರಿಹಾರಗಳು, ವಿದೇಶಿ ಹಣ್ಣುಗಳಾದ ಕಮಲಂ ಮತ್ತು ಅವಕಾಡೊಗಳ ಉತ್ಪಾದನಾ ತಂತ್ರಜ್ಞಾನಗಳು, ಆಕ್ರಮಣಕಾರಿ ಕೀಟಗಳ ನಿರ್ವಹಣೆಗೆ ವೆಚ್ಚ ಪರಿಣಾಮಕಾರಿ ಬಲೆಗಳು ಇತ್ಯಾದಿಗಳು ರೈತರ ಗಮನ ಸೆಳೆಯಲಿವೆ.

ಸಿರಿಧಾನ್ಯಗಳಿಗೆ ಆದ್ಯತೆ

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಘೋಷಣೆಯಾದ ಹಿನ್ನೆಲೆಯಲ್ಲಿ ಈ ಬಾರಿ ಸಿರಿಧಾನ್ಯ ಉತ್ಪನ್ನಗಳ ಮಾರಾಟ ಮತ್ತು ಮಾಹಿತಿಗಾಗಿ ಮಳಿಗೆಗಳನ್ನು ತೆರೆಯಲಾಗುವುದು ಎಂದು ಐಐಎಚ್‌ಆರ್‌ನ ಪರಮಶಿವಯ್ಯ ತಿಳಿಸಿದರು.

250 ಮಾರಾಟ ಮಳಿಗೆಗಳು: ಮೇಳದಲ್ಲಿ 250 ಮಾರಾಟ ಮಳಿಗೆಗಳಿಗೆ ಅವಕಾಶ ನೀಡಲಾಗುವುದು. ಈ ಪೈಕಿ ಬೀಜಗಳು ಮತ್ತು ನಾಟಿ ಗಿಡಗಳು, ಸಸ್ಯ ಪೋಷಕಾಂಶಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಹಸಿರು ಮನೆ ಮತ್ತು ಪಾಲಿಹೌಸ್‌ನ ತೋಟಗಾರಿಕಾ ಪರಿಕರಗಳು, ರೈತ ಉತ್ಪಾದಕ ಸಂಸ್ಥೆಗಳು, ಸರಕಾರಿ, ಎನ್‌ಜಿಒಗಳು, ಕಾರ್ಪೊರೇಟ್ ಮತ್ತು ಹಣಕಾಸು ಸಂಸ್ಥೆಗಳು, ಐಸಿಎಆರ್-ಎಟಿಐಸಿ ಸೇವೆಗಳು ಮತ್ತು ಉತ್ಪನ್ನಗಳು, ಆಹಾರ ಸಂಸ್ಕರಣೆ, ನೀರಾವರಿ ವ್ಯವಸ್ಥೆಗಳು, ಕೃಷಿ ರಫ್ತು ಸೇವೆಗಳು, ಮಾರ್ಕೆಟಿಂಗ್ ಏಜೆನ್ಸಿಗಳು ಹೀಗೆ ನಾನಾ ಮಳಿಗೆಗಳಿರುತ್ತವೆ.

ಮಳಿಗೆಗಳನ್ನು ತೆರೆಯುವವರಿಗೆ ಅವಕಾಶ: ಮಳಿಗೆ ತೆರೆಯುವವರು ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆಗಳು: 91083 64672, 77608 35475. ವೆಬ್‌ಸೈಟ್: https://nhf2023.iihr.res.in/

ಬಿಜಾಪುರ ಬಿಳಿಜೋಳಕ್ಕೆ ಹೊಸ ಜೀವ

ಬಿಜೆವಿ-44, ಸಿಎಸ್‌ವಿ-29ಆರ್ ತಳಿಗಳು । ಹೆಚ್ಚು ಇಳುವರಿ, ರಸಭರಿತ ಮೇವು

■ **ಬಸಪ್ಪ ಎಸ್.ಕುಂಬಾರ** ವಿಜಯಪುರ
basappa.kumbar@timesgroup.com

ಉತ್ತರ ಕರ್ನಾಟಕದ ಪ್ರಮುಖ ಆಹಾರ ಬೆಳೆ ಬಿಳಿಜೋಳ ಬಿತ್ತನೆ ಕಡಿಮೆಯಾಗುತ್ತಿರುವ ಬೆನ್ನಲ್ಲೇ ರೈತರನ್ನು ಉತ್ತೇಜಿಸುವ, ಆರ್ಥಿಕವಾಗಿ ಸದೃಢವಾಗಿಸುವ ನಿಟ್ಟಿನಲ್ಲಿ ವಿಜಯಪುರ ಪ್ರಾದೇಶಿಕ ಕೃಷಿ ವಿಜ್ಞಾನ ಕೇಂದ್ರ ಅಧಿಕ ಇಳುವರಿ ಕೊಡುವ ಬಿಜೆವಿ-44, ಸಿಎಸ್‌ವಿ-29ಆರ್ ಎರಡು ಬಿಳಿ ಜೋಳದ ತಳಿಗಳನ್ನು ಅನ್ವೇಷಣೆ ಮಾಡಿದ್ದು, ರೈತರಲ್ಲಿ ಹೊಸ ಭರವಸೆ ಮೂಡಿಸುತ್ತಿವೆ.

ಈಗಾಗಲೇ ವಿಜಯಪುರ ಜಿಲ್ಲೆಯ ಕೆಲವು ಕಡೆ ಬಿತ್ತನೆ ಮಾಡಲಾಗಿದ್ದು, ರೈತರು ಉತ್ತಮ ಇಳುವರಿಯ ಭರವಸೆಯಲ್ಲಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಬಿ.ಡಿ.ಬಿರಾದಾರ, ವಿಜಯಪುರ ಪ್ರಾದೇಶಿಕ ಕೃಷಿ ವಿಜ್ಞಾನ ಕೇಂದ್ರದ ಜೋಳ ತಳಿ ವರ್ಧಕರಾದ ಜೆ.ಎಂ.ಸಜ್ಜನರ ಹಾಗೂ ವಿಭಾಗದ ತಂಡದವರು ಈ ಎರಡು ತಳಿಗಳನ್ನು ಪರಿಚಯಿಸಿದ್ದು, ಈಗ ಜನಪ್ರಿಯವಾಗುತ್ತಿವೆ.



ಹೆಚ್ಚು ಇಳುವರಿ

ಜೋಳ ಅಭಿವೃದ್ಧಿ ಯೋಜನೆಯಡಿ ಹವಾಮಾನ ಮತ್ತು ಮಣ್ಣಿನ ಗುಣಧರ್ಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂಗಾರು ಜೋಳದ ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇವುಗಳು ಕಪ್ಪು ಮಣ್ಣಿಗೆ ಅತ್ಯಂತ ಸೂಕ್ತವಾದ್ದು, ಎತ್ತರವಾಗಿ ಬೆಳೆಯುತ್ತವೆ. ಸೂಕ್ತ ಪರಿಸರವನ್ನು ಒದಗಿಸಿದರೆ ಮಾಲದಂಡಿ ತಳಿಗಿಂತ ಶೇ. 20-25 ರಷ್ಟು ಹೆಚ್ಚಿನ ಕಾಳು ಹಾಗೂ ಮೇವಿನ ಇಳುವರಿ ಕೊಡುತ್ತವೆ ಎನ್ನುತ್ತಾರೆ ಕೇಂದ್ರದ ವಿಜ್ಞಾನಿಗಳು.

ಬಿ.ಜೆ.ವಿ. 44: ಇದು ಹೆಚ್ಚು ತೇವಾಂಶ ಹಿಡಿದಿಟ್ಟುಕೊಳ್ಳುವ ಕಪ್ಪು ಮಣ್ಣಿನ ಭೂಮಿಗೆ ಸೂಕ್ತವಾಗಿದ್ದು, ಹೆಚ್ಚು ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ. ಇದು ಎಂ 35-1 ತಳಿಗಿಂತ ಉತ್ತಮವಾಗಿದ್ದು, ಎಕರೆಗೆ 8-10 ಕ್ವಿಂಟಾಲ್, 22-25 ಕ್ವಿಂಟಾಲ್ ಮೇವಿನ ಇಳುವರಿ ನೀಡಬಲ್ಲದು. ಇದು ಇದ್ದಿಲು ಕಾಂಡ ಕೊಳೆ ರೋಗ, ಸುಳಿ ನೊಣ ಮತ್ತು ಹೇನುಗಳ ಬಾಧೆಗಳಿಗೆ ಮಧ್ಯಮ ನಿರೋಧಕ ಶಕ್ತಿಯನ್ನು ಹೊಂದಿದೆ.

ಸಿ.ಎಸ್.ವಿ.29ಆರ್: ಇದು ರಾಷ್ಟ್ರಮಟ್ಟದಲ್ಲಿ ಬಿಡುಗಡೆಯಾಗಿದ್ದು, ರಾಜ್ಯದ ಎಲ್ಲ ಹಿಂಗಾರು ಜೋಳ ಬೆಳೆಯುವ ಪ್ರದೇಶಗಳಲ್ಲಿ ಬೆಳೆಬಹುದಾಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ ಹೆಚ್ಚು ತೇವಾಂಶ ಹಿಡಿದಿಟ್ಟುಕೊಳ್ಳುವ ಆಳವಾದ ಕಪ್ಪು ಮಣ್ಣಿನ ಭೂಮಿಗೆ ಸೂಕ್ತವಾಗಿದೆ. ಎಕರೆಗೆ 9 ರಿಂದ 10 ಕ್ವಿಂಟಾಲ್ ಕಾಳು ಮತ್ತು 25 ರಿಂದ 30 ಕ್ವಿಂಟಾಲ್ ಮೇವಿನ ಇಳುವರಿ ಕೊಡಲಿದೆ. ಕಾಳುಗಳು ಗುಣಮಟ್ಟ ಹೊಂದಿವೆ.



ಸಿಎಸ್‌ವಿ-29 ಆರ್ ತಳಿಯ ಜೋಳ ಇದೇ ವರ್ಷ ಬೆಳೆದಿದ್ದು, ಮಾಲದಂಡಿಗಿಂತ ಹೆಚ್ಚಿನ ಎತ್ತರ, ಹೆಚ್ಚಿನ ತೆನೆಯ ಗಾತ್ರ ಹೊಂದಿದೆ. ಇಳುವರಿಯೂ ಹೆಚ್ಚು ದೊರೆಯುವ ಭರವಸೆ ಇದೆ.

-ರೇವಣಸಿದ್ದಪ್ಪ ಬಿರಾದಾರ, ಪ್ರಗತಿಪರ ರೈತ, ಹೊನ್ನಳ್ಳಿ

ರೈತರು ಹೆಚ್ಚು ಜೋಳ ಇಳುವರಿ ಪಡೆಯಲು ಈ ತಳಿಗಳು ಸೂಕ್ತವಾಗಿವೆ. ಕೀಟ ಹಾಗೂ ರೋಗಗಳ ನಿರ್ವಹಣೆ ಕಡಿಮೆಯಾಗಲಿದೆ. ಸಿರಿಧಾನ್ಯಗಳ ರಾಜ ಎನಿಸಿರುವ ಜೋಳವನ್ನು ಸಾವಯವ ಕೃಷಿ ಮೂಲಕ ಬೆಳೆದರೆ ಇನ್ನೂ ಉತ್ತಮವಾಗಿರುತ್ತದೆ. ರೊಟ್ಟಿಯೂ ರುಚಿಕರವಾಗಿರುತ್ತದೆ. ಸದೃಢ ಆರೋಗ್ಯಕ್ಕೆ ಸಹಕಾರಿ ಆಗಬಲ್ಲವು.

-ಡಾ.ಎಸ್.ಎಸ್. ಕರಭಂಟನಾಳ ಪ್ರಧಾನ ವಿಜ್ಞಾನಿ ಹಾಗೂ ಮುಖ್ಯಸ್ಥರು, ಜೋಳ ಅಭಿವೃದ್ಧಿ ಯೋಜನೆ

09-02-2023
V-karnataka Pg 09

ಕೆಂಪು ಗುಲಾಬಿಗೆ ಭರ್ಜರಿ ಡಿಮ್ಯಾಂಡ್

ಪ್ರೇಮಿಗಳ ದಿನಕ್ಕೆ ಬೆಂಗಳೂರಿನಲ್ಲಿ ತಾಜ್‌ಮಹಲ್ ರೋಸ್‌ಗೆ ಹೆಚ್ಚಿದ ಬೇಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರೇಮಿಗಳ ದಿನ (ಫೆ.14) ಇನ್ನೂ ಒಂದು ವಾರ ಇರುವಾಗಲೇ ಬೆಂಗಳೂರಿನಲ್ಲಿ ತಾಜ್ ಮಹಲ್ ಮತ್ತಿತರ ಕೆಂಪು ಗುಲಾಬಿ ಹೂವುಗಳಿಗೆ ಭಾರಿ ಡಿಮ್ಯಾಂಡ್ ಬಂದಿದೆ.

ಹೆಬ್ಬಾಳದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದಲ್ಲಿ (ಐಫ್ಲಾಬ್) ಕೆಂಪು ಗುಲಾಬಿ ಹೂವಿಗೆ ಹೆಚ್ಚು ಬೇಡಿಕೆ ಬರುತ್ತಿದೆ. ಸಾಮಾನ್ಯ ದಿನಗಳಲ್ಲಿ ನಿತ್ಯ ಸುಮಾರು 3 ಲಕ್ಷಕ್ಕೂ ಹೆಚ್ಚು ಹೂವು ಮಾರಾಟವಾಗುತ್ತಿತ್ತು. ಈಗ 5 ಲಕ್ಷಕ್ಕೆ ಏರಿಕೆಯಾಗಿದೆ. ಇಲ್ಲಿ ಬೆಳೆಗಾರರು ಹೂವು ಹರಾಜು ಮೂಲಕ ಮಾರಾಟ ಮಾಡುತ್ತಾರೆ. ಕೆಂಪು ಗುಲಾಬಿ ಖರೀದಿಸಿದವರು ಸ್ಥಳೀಯವಾಗಿ ಮಾರಾಟ ಮಾಡುವುದಲ್ಲದೆ ದೇಶದ ನಾನಾ ಮಹಾನಗರಗಳಿಗೆ ರವಾನಿಸುತ್ತಾರೆ.

ಐಫ್ಲಾಬ್‌ನಲ್ಲಿ ಬಿಕರಿಯಾದ ಗುಲಾಬಿ ಕೋಲ್ಕತ್ತಾ, ಚೆನ್ನೈ, ಹೊಸದಿಲ್ಲಿ ಸೇರಿದಂತೆ ವಿವಿಧೆಡೆಗೆ ಪೂರೈಕೆಯಾಗುತ್ತವೆ. ಈ ಬಾರಿ ಉತ್ತಮ ವಾತಾವರಣ ಹಾಗೂ ಮಳೆ ಸುರಿದ ಪರಿಣಾಮ ಹೂವುಗಳ ಉತ್ಪಾದನೆ ಬೇಡಿಕೆಗೆ ತಕ್ಕಂತೆ ಇದೆ. ಬೆಲೆಯೂ ಉತ್ತಮವಾಗಿದೆ.



ಸ್ವಿಗ್ಗಿಯಿಂದಲೂ ಆರ್ಡರ್

ಸಾರ್ವಜನಿರು ಸಿದ್ಧ ಆಹಾರದಂತಹ ಪದಾರ್ಥಗಳನ್ನು ಮಾತ್ರ ಸ್ವಿಗ್ಗಿಯಲ್ಲಿ ತರಿಸಿಕೊಳ್ಳುತ್ತಿದ್ದರು. ಈಗ ಗುಲಾಬಿ ಹೂವುಗಳನ್ನೂ ಸ್ವಿಗ್ಗಿಯಲ್ಲಿ ಬುಕ್ ಮಾಡಿ ಪ್ರೀತಿ ಪಾತ್ರರಿಗೆ ಕಳುಹಿಸಬಹುದು. ಇಲ್ಲವೇ, ಮನೆ ಬಾಗಿಲಿಗೆ ತರಿಸಿಕೊಳ್ಳಬಹುದು. ಪ್ರೇಮಿಗಳ ದಿನದ ಶುಭಾಶಯ ಪತ್ರಗಳನ್ನೂ ಸ್ವಿಗ್ಗಿಯಲ್ಲಿ ಪಾರ್ಸೆಲ್ ಕಳುಹಿಸಬಹುದು.

ಐಫ್ಲಾಬ್‌ನಲ್ಲಿ ಸಗಟು ದರದ ಹರಾಜಿನಲ್ಲಿ ಒಂದು ಹೂವು 8ರಿಂದ 11 ರೂ. ವರೆಗೆ ಇದೆ. ಪ್ರೇಮಿಗಳ ದಿನಾಚರಣೆ ವೇಳೆಗೆ 15 ರೂ.ಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಹೆಬ್ಬಾಳದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ (ಐಫ್ಲಾಬ್)ದ ವ್ಯವಸ್ಥಾಪಕ ನಿರ್ದೇಶಕ ಬಿ. ವಿಶ್ವನಾಥ ತಿಳಿಸಿದರು.

ಡಚ್ ಗುಲಾಬಿ ಬೆಳೆಯುವಲ್ಲಿ ದೇಶದಲ್ಲೇ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ಕೀನ್ಯಾ, ಇಥೋಪಿಯಾ, ಕೊಲಂಬಿಯಾ ದೇಶಗಳು ಗುಲಾಬಿ ಬೆಳೆಯಲ್ಲಿ ಮುಂಚೂಣಿಯಲ್ಲಿವೆ. ಬಳಕೆಯಲ್ಲಿ ಹೊಸದಿಲ್ಲಿ, ಕೋಲ್ಕತ್ತಾ ಮುಂದಿದೆ. ಉಳಿದಂತೆ ಮುಂಬೈ, ಹೈದರಾಬಾದ್, ಚೆನ್ನೈ, ಗೋವಾದಲ್ಲಿ ಬಳಕೆಯಾಗುತ್ತವೆ. ಹಾಲೆಂಡ್‌ನಲ್ಲಿ ವಿಶ್ವದ ಬೃಹತ್ ಹೂವು ಹರಾಜು ಕೇಂದ್ರವಿದೆ. ಭಾರತದಲ್ಲಿ ಬೆಂಗಳೂರಿನ ಹೆಬ್ಬಾಳದ ಅಂತಾರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ ಪ್ರಥಮ ಸ್ಥಾನದಲ್ಲಿದೆ.

''ರೈತರು ಬೆಳೆದ ತಾಜಾ ಗುಲಾಬಿ ಹೂವು ತೋಟದಿಂದ ನೇರವಾಗಿ ಪ್ರೇಮಿಗಳಿಗೆ ತಲುಪಿಸುವ ಕಾರ್ಯಕ್ಕಾಗಿ ನಾವು ಸ್ವಿಗ್ಗಿ ಮಾರ್ಟ್‌ನ ನೆರವು ಪಡೆಯುತ್ತಿದ್ದೇವೆ. ಇದಕ್ಕಾಗಿ 80 ರೈತರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದೇವೆ. ದೇಶದಾದ್ಯಂತ ಗುಲಾಬಿಗೆ ಬೇಡಿಕೆ ಬಂದಿದೆ. ಕಳೆದ ವರ್ಷವೂ ಸ್ವಿಗ್ಗಿಯೊಂದಿಗೆ 2.50 ಲಕ್ಷ ಗುಲಾಬಿ ಹೂವುಗಳನ್ನು ಪ್ರೇಮಿಗಳಿಗೆ ತಲುಪಿಸಿದ್ದೆವು. ಈ ವರ್ಷ ಇದರ ನಾಲ್ಕು ಪಟ್ಟು ಬೇಡಿಕೆ ಬಂದಿದೆ. ಸ್ವಿಗ್ಗಿ ಇನ್‌ಸ್ಟಾಮಾರ್ಟ್ ಮೂಲಕ ಪ್ರೇಮಿಗಳ ದಿನದ ಅಂಗವಾಗಿ ತಾಜಾ ಡಚ್ ಗುಲಾಬಿ ಮತ್ತು ಶುಭಾಶಯ ಪತ್ರ ತರಿಸಿಕೊಳ್ಳಬಹುದು,'' ಎಂದು ಫ್ಲೋರ್ ಸೀಸನ್ಸ್ ಫ್ಲವರ್ ಡಿಪಾರ್ಟ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜಾಯ್ ಅಲೆಕ್ಸಾಂಡರ್ ತಿಳಿಸಿದರು.

ಚಾಕೊಲೇಟ್‌ಗಳ ಆಕರ್ಷಣೆ

ಪ್ರೇಮಿಗಳ ದಿನಕ್ಕೆ ನಗರದ ಹಲವು ಚಾಕೊಲೇಟ್ ಮಳಿಗೆಗಳು, ಕೇಕ್ ಮಳಿಗೆಗಳಲ್ಲಿ ಪ್ರೇಮಿಗಳ ದಿನಕ್ಕೆಂದೇ 'ಹೃದಯ' ಆಕಾರದ ಚಾಕೊಲೇಟ್‌ಗಳು, ಕೇಕ್‌ಗಳು ತಯಾರಾಗಿವೆ. ಜತೆಗೆ ಪ್ರೀತಿ ಪಾತ್ರರಿಗೆ ನೀಡುವ ಉಡುಗೊರೆಗಳು ಕೂಡ ಮಾರಾಟ ಮಳಿಗೆಗಳಲ್ಲಿ ಯುವಕರನ್ನು ಸೆಳೆಯುತ್ತಿವೆ. ಒಳ್ಳೆಯ ಪುಸ್ತಕಗಳು ಕೂಡ ಪ್ರೀತಿ ಪಾತ್ರರನ್ನು ಸೆಳೆಯುತ್ತಿವೆ.

09-02-2023
V-karnataka Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in